ಶ್ರೀ ಎಸ್. ಬಂಗಾರಪ್ಪ.—ಕೆಲವು ವಿಷಯಗಳನ್ನು ಖಾಸಗಿಯಾಗಿ ನಾವು ನೀವೆಲ್ಲರೂ ಅಧ್ಯಕ್ಷರ ಕೊಠಡಿಯಲ್ಲಿ ಸೇರಿ ಮಾತನಾಡೋಣ.

ಆಯುರ್ವೇದ ಮತ್ತು ಯುನಾನಿ ವಿದ್ಯಾರ್ಥಿಗಳು ಆಮರಣಾಂತ ಉಪವಾಸ ಮಾಡುತ್ತಿರುವ ಬಗ್ಗೆ

ಶ್ರೀ ಕೆ. ಎಸ್. ಈಶ್ವರಪ್ಪ.— ಮಾನ್ಯ ಅಧ್ಯಕ್ಷರೆ, ಆಯುರ್ವೇದ ಮತ್ತು ಯುನಾನಿ ವಿದ್ಯಾರ್ಥಿಗಳು ಆಮರಣಾಂತ ಉಪವಾಸವನ್ನು ಕೂತಿದ್ದಾರೆ. ಇದರ ಬಗ್ಗೆ ಆಪರು ನೋಟೀಸನ್ನು ಸಹ ಕೊಟ್ಟಿದ್ದಾರೆ. ಮಾನ್ಯ ಆರೋಗ್ಯ ಸಚಿವರು ಅವರನ್ನು ಕರೆಸಿ ಮಾತನಾಡಿದ್ದಾರೊ, ಇಲ್ಲವೋ ಎಂಬುದನ್ನು ತಿಳಿಸಬೇಕು. ಅವರನ್ನು ಕರೆಸಿಲ್ಲದಿದ್ದರೆ ಕರೆಸಿ ಒಂದು ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.— ಆ ವಿದ್ಯಾರ್ಥಿ ಮುಖಂಡರನ್ನು ದಯವಿಟ್ಟು ಕರೆಸಿಕೊಂಡು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಆಯುರ್ವೇದ ಮತ್ತು ಯುನಾನಿ ವಿದ್ಯಾರ್ಥಿಗಳ ಮುಷ್ಕರದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ,...

ಶ್ರೀ ಡಿ. ಬಿ. ಚಂದ್ರೇಗೌಡ.—ಯೂನಿವರ್ಸಿಟಿಯವರ ಬಿಗಿ ನಿಲುವಿನಿಂದ ಈ ಪರಸ್ಥಿತಿ ಉಂಟಾಗಿದೆ, ಅದ್ದರಿಂದ ನೀವು ಮಧ್ಯೆ ಪ್ರವೇಶ ಮಾಡಿ ಏನಾದರೂ ಒಂದು ಪರಿಹಾರವನ್ನು ಕಂಡು ಹಿಡಿಯುತ್ತೀರಾ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಾವು ಅವರನ್ನು ಕರೆಸಿದ್ದೇನೆ. ಒಂದು ವಿಚಾರ ಏನೆಂದರೆ, ಹಿಂದೆ ಒಂದೂವರೆ ವರ್ಷದ ಒಂದು ಕೋರ್ಸ್ ಆಪರಿಗೆ ಇತ್ತು. ಅದು ಎಂದರೆ ಪ್ರಥಮ ಚಿಕಿತ್ಸೆ ಮಾಡುವುದು, ಇನ್ನೂ ಮುಂತಾದನ್ನು ಕಲಿತುಕೊಳ್ಳುವುದು. ಆ ಕೋರ್ಸನ್ನು ಹಿಂದೆ ಇದ್ದಂಥ ಕಾಲಪತಿಗಳು ೩ ವರ್ಷದ ಕೋರ್ಸ್ ಎಂದು ಮಾಡಿ, ಆಲೋಪತಿಕ್ ಮೆಡಿಸನ್ ವಿದ್ಯೆಗೆ ಸಮಾನವಾದಂಥ ಒಂದು ಕೋರ್ಸ್ ಎಂದು ಮಾಡಿ ೫ ವರ್ಷದವರಿಗೆ ಮುಂದುವರಿಸಬೇಕೆಂದು ಮಾಡಿದರು ಇದನ್ನು ಮಾಡಿದ್ದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ. ಆದರೆ ಅಕೆಡಮಿಕ್ ಕೌನ್ಸಿಲ್‌ನವರು ಇದನ್ನು ಆರೀತಿ ಮಾಡುವುದಕ್ಕೆ ಆಗುವುದಿಲ್ಲವೆಂದು ಪಾಪಸು ಕಳುಹಿಸಿದರು. ಇದಾದ ಮೇಲೆ ಒಂದೂವರೆ ವರ್ಷದ ಕೋರ್ಸೂ ಹೋಯಿತು, ೩ ವರ್ಷದ ಕೋರ್ಸೂ ಹೋಯಿತು. ಅಂದರೆ ಎರಡು ಕೋರ್ಸುಗಳು ಹೋದವು. ಆಗ ನಾನು ಮಾನ್ಯ ಉಪ ಕುಲಪತಿಗಳನ್ನು ಕರೆಸಿ ಪರಿಸ್ಥಿತಿ ಹೀಗಾಗಿದೆ ಹಿಂದೆ ಇದ್ದಂಥ ಒಂದೂವರೆ ವರ್ಷದ ಕೋರ್ಸನ್ನೇ ಎತಕ್ಕೆ ಪ್ರಾರಂಭ ಮಾಡಬಾರದೆಂದು ಕೇಳಿದೆ. ಅದಕ್ಕೆ ಅವರು ಹೇಳಿದ್ದು ಏನೆಂದರೆ, ಈಗಾಗಲೇ ನಾವು ಒಂದೂವರೆ ವರ್ಷದ ಕೋರ್ಸನ್ನು ಮುಚ್ಚಿಬಿಟ್ಟಿದ್ದೇವೆ ಈಗ ಮತ್ತೆ ಅದನ್ನು ಮಾಡಬೇಕಾದರೆ ಅದಕ್ಕೆ ಡೈರೆಕ್ಟರ್‌ರವರಿಂದಲೇ ಒಂದು ಅರ್ಜಿ ಬರಬೇಕು, ಅದು ಬಂದಮೇಲೆ ಅದನ್ನು ನಾವು ಅಕಡೆಮಿಕ್ ಕೌನ್ಸಿಲ್‌ನಲ್ಲಿ ಇಟ್ಟು ಈ ಒಂದೂವರೆ ವರ್ಷದ ಕೋರ್ಸಿಗೆ ಬೇರೆ ರೀತಿಯ ಒಂದು ಸರ್ಟಿಫಿಕೇಟನ್ನು ಕೊಡಬಹುದು, ಆದರೆ ಇದನ್ನೆಲ್ಲಾ ಮಾಡಬೇಕಾದರೆ ಸ್ವಲ್ಪ ಟೈಂ ತೆಗೆದುಕೊಳ್ಳುತ್ತದೆ ಎಂದು ಹೇಳಿದರು. ಆಮೇಲೆ ಇಷ್ಟರಲ್ಲೇ ಹುಡುಗರು ಬಹಳ ಜೋರು ಜೋರಾಗಿ ಉಪವಾಸ ಸತ್ಯಾಗ್ರಹ, ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಮಾಡುತ್ತೇವೆಂದು ಡಿಕ್ಲೇರ್ ಮಾಡಿಬಿಟ್ಟರು. ಆದಕ್ಕೆ ಮುಂಚೆ ನಾನು ಏನು ಮಾಡಿದೆ ಅಂದರೆ, ನಮ್ಮ ಮಾನ್ಯ ರಾಜ್ಯಪಾಲರಿಗೆ ಕಾಗದವನ್ನು ಬರೆದು ನೀವು ಛಾನ್ಸಲರ್ ಇದ್ದೀರಿ, ನೀವು ಅಂಥ ಹುಡುಗರನ್ನು ಕರೆಸಿ ಡೈರೆಕ್ಷನ್ ಕೊಟ್ಟು ಹುಡುಗರನ್ನು ಸಮಾಧಾನ ಮಾಡಿ ಎಂದು ಹೇಳಿದೆ. ಏತಕೆಂದರೆ ಮಾನ್ಯ ವೈಸ್‌ಛಾನ್ಸಲರ್‌ರವರು ಪಂಜೇಶಿಯಾಕ್ಕೆ ಹೋಗಿದ್ದರು. ಆವರು ಬಂದ ತಕ್ಷಣವೇ ವಿರ್ಪಾಡು ಮಾಡೋಣ, ಸಿಂಡಿಕೇಟ್ ಅಕಾಡೆಮಿಕ್ ಕೌನ್ಸಿಲ್ ಇದೆ ನೀವು ಅಷ್ಟರವರೆಗೆ ಹೀಗೆ ಮಾಡಿ ಎಂದು ಡೈರೆಕ್ಷನ್ ಕೊಡಬೇಕು ಎಂದು ಹೇಳಿದೆ. ಮೊನ್ನೆ ತಾನೇ ಅವರನ್ನು ಹೋಗಿ ನೋಡಿಯೂ ಇರುತ್ತೇನೆ. ಆಗ ಏನು ಆಯಿತು ಎಂಬುದನ್ನು ಹೇಳುತ್ತೇನೆ. ೨೨ನೇ ತಾರೀಖು ಪ್ರೆಸಿಡೆಂಟರು ಬರುತ್ತಾರೆ, ೨೩ನೇ ತಾರೀಖು ಅವರು ಹೋದಮೇಲೆ ಮಿಟಿಂಗ್ ಕರೆಯುತ್ತೇನೆಂದು ಮಾನ್ಯ ರಾಜ್ಯಪಾಲರು ಹೇಳಿದರು. ಈ ಮಧ್ಯೆ ನೆನ್ನೆ ದಿವಸ ಹುಡುಗರನ್ನು ಮತ್ತು ಅಧೀಕಾರಿಗಳನ್ನು ಕರೆಸಿ ಇಬ್ಬರಿಗೂ ಕಾಗದವನ್ನು ಬರೆದಿರುತ್ತೇನೆ. ದಯವಿಟ್ಟು ನೀವು ಇದನ್ನು ಪಾಪಸ್ ತೆಗೆದುಕೊಳ್ಳಿ ಎಂದು ಹೇಳಿದೆ. ಅದಕ್ಕೆ ಆವರು ಪಾಪಸ್ ತೆಗೆದು ಕೊಂಡಿರುತ್ತೇವೆಂದು ಹೇಳಿದ್ದಾರೆ. ಬೇಕಾದರೆ ರಾಜ್ಯಪಾಲರಿಗೆ ಬರೆದ ಕಾಗದವನ್ನು ಓದುತ್ತೇನೆ. ಅದಕ್ಕೆ ಹುಡುಗರು ಪಾಪಸ್ ತೆಗೆದುಕೊಂಡರು. ಛಾನ್ಸಲರ್‌ರವರೂ ಕೂಡ ಮೀಟಿಂಗ್ ಕರೆಯುತ್ತೇವೆಂದು ಹೇಳಿದರು. ಇಷ್ಟರಲ್ಲಿ ಸೆಕ್ರೆಟರಿಯವರು ಹೇಳಿದ ಹಾಗೆ ನಾವು ಮಾಡುತ್ತಿದ್ದೇವೆ.

Goverment is at is. ನಿಮಗೆ ಒಂದೂವರೆ ವರ್ಷದ ಸರ್ಟಿಫಿಕೇಟ್ ಕೋರ್ಸ್‌ನ್ನು ಮಾಡುತ್ತೇವೆ, ಯಾವುದೇ ಹೆಸರಿನಲ್ಲಿ ಮಾಡಿದರೂ ಅದು ನಿಮಗೆ ಅನುಕೂಲವಾಗುವಂತೆ ಮಾಡುತ್ತೇವೆಂದು ಹೇಳಿದ ಮೇಲೆ ಹುಡುಗರು ಒಪ್ಪಿಕೊಂಡು ಹೋದರು. ಹೋಗುವಷ್ಟರಲ್ಲಿ ಆ ಹುಡುಗರು ಗೌವರ್ನಮೆಂಟ್ ಆರ್ಡರ್ ಕೊಡಿ ಎಂದು ಕೇಳಿದರು. ಆ ಗೌವರ್ನಮೆಂಟ್ ಆರ್ಡರನ್ನು ನಾನು ಕೊಡುವುದಕ್ಕೆ ಆಗುತ್ತದೆಯೇ ? ದಯಾನಂದ ಅವರೂ ಬಂದಿದ್ದರು. ಎಷ್ಟು ವಿನಂತಿ ಮಾಡಿಕೊಂಡರು ಹುಡುಗರಿಗೆ ಅರ್ಥವಾಗುತ್ತಿಲ್ಲ. ಹೇಳಿದ ಮಾತನ್ನು ಕೇಳುತ್ತಿರಲಿಲ್ಲ. ಪರಿಸ್ಥಿತಿ ಅಷ್ಟರವರೆಗೆ ಹೋಗಬಾರದಾಗಿತ್ತು.

ಶ್ರೀ ವಾಟಾಳ್ ನಾಗರಾಜ್.—ಅವರನ್ನು ಮತ್ತೆ ಕರೆಸಿ ಮಾತನಾಡಿ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಮಗೇನು ಅದು ಪ್ರಿಸ್ಟೀಜ್ ಕ್ವೆಶ್ಚನ್ ಅಲ್ಲ. ಈಗಲೂ ಅವರನ್ನು ಕರೆಸಿ ಮಾತನಾಡುತ್ತೇನೆ.

ಗಮನ ಸೆಳೆಯಂಮ ಸೂಚನೆ

ರಾಜ್ಯದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಅಭಾವದಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವ ಬಗ್ಗೆ

ಶ್ರೀ ಆರ್. ಎಲ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಅಭಾವದಿಂದ ಉಂಟಾಗಿರುವ ತೊಂದರೆಯ ಬಗ್ಗೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಟಿ.ಎನ್.ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರುಗಳಾದ ಎಲ್. ಆರ್ ಶಿವರಾಮೇಗೌಡರು, ಎಂ. ಎಸ್. ಆತ್ಮಾನಂದರವರು, ಹೆಚ್.ಎಂ. ರೇವಣ್ಣನವರು, ರಾಮಲಿಂಗರೆಡ್ಡಿ ಯವರು ಮತ್ತು ಮಾನ್ಯ ಎಂ.ವಿ. ವೆಂಕಟಪ್ಪನವರು ಸೇರಿ ಒಟ್ಟಾರೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂಥ ಈ ಸೂಚನೆಗೆ ಸರ್ಕಾರದ ಉತ್ತರ ಈ ರೀತಿ ಇದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಎಂ.ವಿ. ವೆಂಕಟಪ್ಪನವರ ಹೆಸರನ್ನು ಮಂತ್ರಿಗಳು ವಿತಕ್ಕೆ ಸೇರಿಸಬೇಕು.

ಅಧ್ಯಕ್ಷರು.—ಅವರ ಹೆಸರು ಇಲ್ಲಿದೆ. ನಾನು ಸೇರಿಸಿದ್ದೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿರತಕ್ಕಂಥ ಈ ಒಂದು ಸೂಚನೆಯ ಬಗ್ಗೆ ಸರ್ಕಾರದ ಉತ್ತರ ಈ ರೀತಿ ಇದೆ.

ಪೆಟ್ರೋಲ್ ಮತ್ತು ಡಿಸೇಲ್‌ನ ಹಂಚಿಕೆ ಮತ್ತು ವಿತರಣೆ, ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದೆ. ಇಂಡಿಯನ್ ಆಯಿಲ್ ಕಾರ್ಪೊರೇಶನ್ ಚೀಫ್ ಡಿವಿಜನಲ್ ಮ್ಯಾನೇಜರ್, ಬೆಂಗಳೂರು ಇವರನ್ನು ರಾಜ್ಯಮಟ್ಟದ ಸಮನ್ವಯ ಅಧಿಕಾರಿಯನ್ನಾಗಿ, ಭಾರತ ಸರ್ಕಾರವು ನಾಮನಿರ್ದೇಶನ ಮಾಡಿದೆ. ಇವರು ನೀಡಿರುವ ಮಾಹಿತಿಯ ಪ್ರಕಾರ ರಾಜ್ಯಕ್ಕೆ ಪೆಟ್ರೋಲ್ ಹಂಚಿಕೆ ಪ್ರಮಾಣವನ್ನು ಮೊತಾ ಮಾಡಿರುವುದಿಲ್ಲ. ವಾಸ್ತವವಾಗಿ ಕಳೆದ ವರ್ಷದ ಎತ್ತುವಳಿಗೆ ಹೋಲಿಸಿದರೆ ಈ ಸಾರಿ ಶೇ. ೪ ರಷ್ಟು ಹೆಚ್ಚಾಗಿದೆ. ಪೆಟ್ರೋಲಿನ ಅಭಾವ ಇರುವುದಿಲ್ಲ ಗ್ರಾಹಕರು ಗಾಬರಿಗೊಂಡು ಪೆಟ್ರೋಲನ್ನು ಖರೀದಿಸುವಿಕೆ ಈಗ ತಲೆದೋರಿರುವ ಪೆಟ್ರೋಲಿನ ಅಭಾವಕ್ಕೆ ಕಾರಣವಾಗಿದೆ.

ರಾಜ್ಯದಲ್ಲಿ ಡಿಸೇಲ್‌ನ ಅಭಾವದ ಬಗ್ಗೆ ಹೇಳುವುದಾದರೆ ಹಿಂದಿನ ವರ್ಷಗಳ ಎತ್ತುವಳಿಗಿಂತ (Lifting) ಶೇ.೧೦ ರಷ್ಟು ಕಡಿತವನ್ನು ದಿನಾಂಕ ೦೧.೧೧.೯೦ರಿಂದ ಭಾರತ ಸರ್ಕಾರವು ವಿಧಿಸಿದೆ. ಸಾಧಾರಣವಾಗಿ ಹಿಂದಿನ ವರ್ಷದ ಎತ್ತುವಳಿಗಿಂತ ಅನುರೂಪವಾಗಿ ಪೆಟ್ರೋಲ್ ಉತ್ಪನ್ನಗಳನ್ನು ಅದರ ಉತ್ಪತ್ತಿಯ ಶೇ. ೧೦ರಿಂದ ೧೫ರ ದರದಲ್ಲಿ ಪೆಚ್ಚಿಗೆ ಬಿಡುಗಡೆ ಮಾಡಲಾಗುತ್ತಿತ್ತು. ಆದರೆ ೧.೧೧.೯೦ರಿಂದ ಶೇ.೧೦ ರಷ್ಟು ಕಡಿತ ಮಾಡಿರುವುದರಿಂದ ಒಟ್ಟಾರೆ ಕ್ಷ. ೨೦ರಷ್ಟು ಕಡಿತ ಉಂಟಾಗಿದೆ. ೧೯೯೦ ಆಗಸ್ಟ್ ಮಾಹೆಯಲ್ಲಿ ಲಿಂಗಸೂಗೂರು ಮೆಟ್ರಿಕ್ ಟನ್ ಡೀಸೆಲ್ ಅನ್ನು ಹಂಚಿದ್ದು ಅಕ್ಟೋಬರ್ ೧೯೯೦ರಲ್ಲಿ ೭೪೫೩೨ ಮೆಟ್ರಿಕ್ ಟನ್‌ಗಳಿಗೆ ಇಳಿಸಲಾಗಿದೆ.

ಪೆಟ್ರೋಲ್ ಮತ್ತು ಡೀಸೆಲ್‌ಗಳಿಗೆ ಸೀಮೆಎಣ್ಣೆ ಮಾಗೂ ಇತರೆ ಮೊದಲಿನ ವಸ್ತುಗಳನ್ನು ಕಲಬೆರಕೆ ಮಾಡುವುದಕ್ಕೆ ಸಂಬಂಧಿಸಿದಂತೆ ಅದನ್ನು ತಡೆಗಟ್ಟಲು ಭಾರತ ಸರ್ಕಾರವು ಆಗತ್ಯ ವಸ್ತುಗಳ ಕಾಯ್ದೆ ಅಡಿಯಲ್ಲಿ ಆದೇಶವನ್ನು ಹೊರಡಿಸಿದೆ. ಅದರಂತೆ ಮೋಟಾರ್ ಸ್ಪಿರಿಟ್ ಮತ್ತು ಹೈಸ್ಪೀಡ್